೩. ಗಮನ ಸೆಳೆಯುವ ಸೂಚನೆ

ವಿಷಯ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನಾ ಕಾರ್ಯಕ್ರಮಕ್ಕೆ ಹಣ ಬಿಡುಗಡೆಯಾಗದಿರುವುದರಿಂದ ತುಮಕೂರು ಜಿಲ್ಲೆಯ ನೇಕಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಜವ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ

ವಿಷಯ ತುಮಕೂರು ಶ್ರೀ ಅಪ್ಪು ಪಟ್ಟಣ ಶೆಟ್ಟಿ (ಜವಳಿ ಸಚಿವರು) ವಸತಿ ಕಾರ್ಯಾಗಾರ ಯೋಜನೆಯು ಕೆಳಕಂಡ ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ

೧ ಈ ಯೋನೆಯಡಿ ಸೌಲಭ್ಯ ಪಡೆಯುವ ಫಲಾನುಭವಿಯು ವಸತಿ ರಹಿತರಾಗಿರಬೇಕು

೨ ನಿವೇಶನದ ದಾಖಲಾತಿಗಳು ಪತಿ–ಪತ್ನಿಯ ಹೆಸರಿನಲ್ಲಿ ಜಂಟಿ ಖಾತೆ ಹೊಂದಿರಬೇಕು

೩ ನೇಯ್ಗೆ ವೃತ್ತಿಯಿಂದ ಕನಿಷ್ಟ ಶೇಕಡ ೫೦ ರಷ್ಟು ವಾರ್ಷಿಕ ವರಮಾನವನ್ನು ಹೊಂದಿರಬೇಕು ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘದ ಸದಸ್ಯರಾಗಿರಬೇಕು

೪ ಸರ್ಕಾರದ ಇತರೆ ಯಾವುದೇ ಯೋಜನೆಯಡಿ ಇದೇ ತೆರನಾದ ಸೌಲಭ್ಯವನ್ನು ಪಡೆದಿರಬಾರದು